**ಆರ್‌ಬಿಐ/2005–06/392**
**ಯುಬಿಡಿ (ಪಿಸಿಬಿ) ಸುತ್ತೋಲೆ ನಂ 54/09.39.000/05–06**
ಮೇ 26, 2006

ಎಲ್ಲ ಪ್ರಾಥಮಿಕ ಬ್ಯಾಂಕುಗಳ (**ಪೌರ** ಸಹಕಾರಿ ಬ್ಯಾಂಕುಗಳ)
ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
ಮಾನ್ಯರೇ,

**2006–07 ನೇ ಸಾಲಿನ ವಾರ್ಷಿಕ ಕಾರ್ಯನೀತಿ ವಿವರಪತ್ರ– ನ್ಯಾಯಯುತ ಪದ್ಧತಿಗಳ ಸಂಹಿತೆ– ಬ್ಯಾಂಕ್ ಶುಲ್ಕಗಳ ಪ್ರದರ್ಶನ–ಪೌರ ಸಹಕರಿ ಬ್ಯಾಂಕುಗಳು (ಯುಸಿಬಿಗಳು).**

2006–07ನೇ ಸಾಲಿನ ವಾರ್ಷಿಕ ಕಾರ್ಯನೀತಿ ವಿವರಪತ್ರದ 162ನೇ ಪ್ಯಾರಾವನ್ನು ದಯವಿಟ್ಟು ನೋಡಿ. ಅದರ ಪ್ರತಿಯನ್ನು ಲಗತ್ತಿಸಲಾಗಿದೆ.

2. ಚಾಲ್ತಿ ಸೂಚನೆಗಳ ಪ್ರಕಾರ, ಸೇವಾ ಶುಲ್ಕಗಳನ್ನು ಗೊತ್ತುಪಡಿಸುವ ನಿರ್ಧಾರ ತೆಗೆದುಕೊಳ್ಳುವುದನ್ನು ಸಂಬಂಧಪಟ್ಟ ಬ್ಯಾಂಕುಗಳ ಮಂಡಳಿಗಳ ವಿವೇಚನೆಗೆ ಬಿಡಲಾಗಿದೆ. ಸೇವಾ ಶುಲ್ಕಗಳನ್ನು ನಿಗದಿಪಡಿಸುವಾಗ ಬ್ಯಾಂಕುಗಳು, ಸಾಮಾನ್ಯವಾಗಿ ಶುಲ್ಕಗಳು ಈ ಸೇವೆಗಳನ್ನು ಒದಗಿಸಲು ತಗಲುವ ವೆಚ್ಚಕ್ಕೆ ತಕ್ಕಂತೆ ಇರುವ ಹಾಗೆ ಮತ್ತು ಕಡಿಮೆ ಮೌಲ್ಯದ/ಪ್ರಮಾಣದ ವ್ಯವಹಾರ ನಡೆಸುವ ಗ್ರಾಹಕರಿಗೆ ಭಾರವಗದ ಹಾಗೆ ನೋಡಿಕೊಳ್ಳಬೇಕು ಎಂದು ನಿರೀಕ್ಷಿಸಲಾಗಿದೆ.

3. ಸೂಕ್ತವಲ್ಲದ ಮತ್ತು ಪಾರದರ್ಶಕವಲ್ಲದ ಸೇವಾ ಶುಲ್ಕಗಳನ್ನು ಬ್ಯಾಂಕುಗಳು ವಿಧಿಸುತ್ತಿರುವ ಬಗ್ಗೆ, ಸಾರ್ವಜನಿಕರು, ಈ ಸಂಬಂಧದಲ್ಲಿ ಈಗ ಇರುವ ಸಾಂಸ್ಥಿಕ ವ್ಯವಸ್ಥೆಯು ಸಮರ್ಪಕವಾಗಿಲ್ಲವೆಂದು ಸೂಚಿಸಿ ರಿಸರ್ವ್ ಬ್ಯಾಂಕಿಗೆ ಮನವಿಗಳನ್ನು ನಿರಂತರವಾಗಿ ಸಲ್ಲಿಸುತ್ತಲೇ ಇದ್ದಾರೆ. ಬ್ಯಾಂಕಿಂಗ್ ಸೇವೆಗಳಲ್ಲಿ ಪಾರದರ್ಶಕತೆಯನ್ನು ತರುವಂತೆ ಮಾಡುವ ದೃಷ್ಟಿಯಿಂದ ತಮ್ಮ ವೆಬ್‌ಸೈಟ್‌ನಲ್ಲಿ ವಿವಿಧ ಸೇವಾ ಶುಲ್ಕಗಳ ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧ–ಖ ರ ನಮೂನೆಯಲ್ಲಿ ಪ್ರದರ್ಶಿಸುವಂತೆ ಮತ್ತು ಪರಿಷ್ಕರಣೆ ಮಾಡುವಂತೆ ಅನುಸೂಚಿತ ಬ್ಯಾಂಕುಗಳಿಗೆ ಸೂಚಿಸಲಾಗಿದೆ. ಕೊಡಮಾಡುವ ಸೇವೆಗಳನ್ನವಲಂಬಿಸಿ ನಮೂನೆಗಳನ್ನು ಮಾರ್ಪಾಟು ಮಾಡಿಕೊಳ್ಳಬಹುದು.

4. ಅಲ್ಲದೆ, ಅನುಸೂಚಿತ ನಗರ ಸಹಕಾರಿ ಬ್ಯಾಂಕುಗಳೂ ಸೇರಿದಂತೆ ಎಲ್ಲ ಇತರ ನಗರ ಸಹಕಾರಿ ಬ್ಯಾಂಕುಗಳಿಗೆ ಸಹಾ ಅನುಬಂಧ ಖಖ ರಲ್ಲಿರುವಂತೆ ಕೆಲವು ಸೇವೆಗಳಿಗೆ ಸಂಬಂಧಪಟ್ಟ ಶುಲ್ಕಗಳನ್ನು ಪ್ರದರ್ಶಿಸುವಂತೆ ತಿಳಿಸಲಾಗಿದೆ. ಇದನ್ನು ಸ್ಥಳೀಯ ಭಾಷೆಗಳಲ್ಲಿಯೂ ಸಹ ಪ್ರದರ್ಶಿಸತಕ್ಕದ್ದು.

5. ಪ್ರಸ್ತುತ ಅನ್ವಯವಾಗುವ ಸೇವಾ ಶುಲ್ಕಗಳ ವಿವರಗಳನ್ನು (ಅನುಬಂಧ ಖಖ ರಂತೆ) ಭಾರತೀಯ ರಿಸರ್ವ್ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಅಳವಡಿಸಲು ಅನುಕೂಲವಾಗುವಂತೆ, ಸದರಿ ವಿವರಗಳನ್ನು ಜೂನ್ 15, 2006 ರ ಹೊತ್ತಿಗೆ ಅನುಸೂಚಿತ ನಗರ ಸಹಕಾರಿ ಬ್ಯಾಂಕುಗಳು ನಮಗೆ ಒದಗಿಸಬೇಕು. ಅಲ್ಲದೆ, ಈ ಮಾಹಿತಿಯನ್ನು ಪರಿಷ್ಕರಣೆ ಮಾಡಲು, ಕಾಲಕಾಲಕ್ಕೆ ಸೇವಾ ಶುಲ್ಕಗಳಲ್ಲಿ ಆಗಿರುವ ಬದಲಾವಣೆಗಳನ್ನು ಸಹ ನಮಗೆ ತಿಳಿಸತಕ್ಕದ್ದು.

ತಮ್ಮ ವಿಶ್ವಾಸಿ,
(ಎನ್. ಎಸ್. ವಿಶ್ವನಾಥನ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು (ಪ್ರಭಾರ).

**2006–07 ನೇ ಸಾಲಿನ (ಏಪ್ರಿಲ್ 2006) ವಾರ್ಷಿಕ ಕಾರ್ಯನೀತಿ ವಿವರಪತ್ರ**
**ನ್ಯಾಯಯುತವಾದ ಪದ್ಧತಿಗಳ ಸಂಹಿತೆ: ಸೂಕ್ತ ಬ್ಯಾಂಕ್ ಶುಲ್ಕಗಳು**

162. ಸೂಕ್ತವಲ್ಲದ ಮತ್ತು ಪಾರದರ್ಶಕವಲ್ಲದ ಸೇವಾ ಶುಲ್ಕಗಳನ್ನು ಬ್ಯಾಂಕುಗಳು ವಿಧಿಸುತ್ತಿರುವ ಬಗ್ಗೆ, ಸಾರ್ವಜನಿಕರು ಈ ಸಂಬಂಧದಲ್ಲಿ ಈಗ ಇರುವ ಸಾಂಸ್ಥಿಕ ವ್ಯವಸ್ಥೆಯು ಸಮರ್ಪಕವಾಗಿಲ್ಲವೆಂದು ಸೂಚಿಸಿ ರಿಸರ್ವ್ ಬ್ಯಾಂಕಿಗೆ ಮನವಿಗಳನ್ನು ನಿರಂತರವಾಗಿ ಸಲ್ಲಿಸುತ್ತಲೇ ಇದ್ದಾರೆ. ಬ್ಯಾಂಕಿಂಗ್ ಸೇವೆಗಳಲ್ಲಿ ನ್ಯಾಯಯುತ ಪದ್ಧತಿಗಳು ಇರುವಂತೆ ಮಾಡುವ ದೃಷ್ಟಿಯಿಂದ ಈ ಮುಂದಿನಂತೆ ಪ್ರಸ್ತಾವಿಸಲಾಗಿದೆ:

" ಬ್ಯಾಂಕುಗಳು ತಮ್ಮ ಕಚೇರಿಗಳಲ್ಲಿ/ ಶಾಖೆಗಳಲ್ಲಿ ಹಾಗೂ ತಮ್ಮ ವೆಬ್‌ಸೈಟ್‌ಗಳಲ್ಲಿ ವಿವಿಧ ಸೇವಾ ಶುಲ್ಕಗಳ ವಿವರಗಳನ್ನು ರಿಸರ್ವ್ ಬ್ಯಾಂಕ್ ಅನುಮೋದಿಸುವ ನಮೂನೆಯಲ್ಲಿ ಪ್ರದರ್ಶಿಸುವುದನ್ನು ಮತ್ತು ಅವುಗಳನ್ನು ಪರಿಷ್ಕರಿಸುವುದನ್ನೂ ಕಡ್ಡಾಯಗೊಳಿಸುವುದು. ರಿಸರ್ವ್ ಬ್ಯಾಂಕು ಸಹ ಅಂಥ ವಿವರಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಅಳವಡಿಸುವುದು".

**ಅನುಬಂಧ–ಖ**

ಸೇವಾ ಶುಲ್ಕಗಳು– ಬ್ಯಾಂಕುಗಳ ವೆಬ್‌ಸೈಟ್‌ನಲ್ಲಿ ಅಳವಡಿಸಬೇಕಾದ ಕನಿಷ್ಠ ಮಾಹಿತಿ

| |
|---|
| **ಬ್ಯಾಂಕಿನ ಹೆಸರು** |
| **ಉಳಿತಾಯ ಬ್ಯಾಂಕ್ ಖಾತೆ– ನಿರ್ಬಂಧ ರಹಿತ ಖಾತೆ** |
| ಕನಿಷ್ಠ ಶಿಲ್ಕು |
| ಕನಿಷ್ಠ ಶಿಲ್ಕನ್ನು ನಿರ್ವಹಿಸದೇ ಇರುವುದಕ್ಕೆ ಶುಲ್ಕಗಳು |
| **ಉಳಿತಾಯ ಬ್ಯಾಂಕ್ ಖಾತೆಗಳು– ಚೆಕ್ ಸೌಲಭ್ಯದೊಂದಿಗೆ** |
| ಕನಿಷ್ಠ ಶಿಲ್ಕು |
| ಕನಿಷ್ಠ ಶಿಲ್ಕನ್ನು ನಿರ್ವಹಿಸದೇ ಇರುವುದಕ್ಕೆ ಶುಲ್ಕಗಳು |
| **ಉಳಿತಾಯ ಬ್ಯಾಂಕ್ ಖಾತೆ– ಚೆಕ್ ಸೌಲಭ್ಯ ರಹಿತ** |
| ಕನಿಷ್ಠ ಶಿಲ್ಕು |
| ಕನಿಷ್ಠ ಶಿಲ್ಕನ್ನು ನಿರ್ವಹಿಸದೇ ಇರುವುದಕ್ಕೆ ಶುಲ್ಕಗಳು |
| **ಇತರ ಉಳಿತಾಯ ಬ್ಯಾಂಕ್ ಖಾತೆ ಸೌಲಭ್ಯಗಳು** |
| ನಕಲು ವಿವರಪತ್ರದ ನೀಡಿಕೆ |
| ಬಿಡಿ ಚೆಕ್ ಹಾಳೆಗಳ ನೀಡಿಕೆ |
| ನಕಲು ಪಾಸ್ ಪುಸ್ತಕದ ನೀಡಿಕೆ |
| ಕನಿಷ್ಠ ಶಿಲ್ಕನ್ನು ಲೆಕ್ಕ ಹಾಕುವ ವಿಧಾನ |
| **ಸ್ವಂತ ಬ್ಯಾಂಕಿನ ಮೂಲಕ ಹಣ ಪಾವತಿ ಮಾಡುವ ಸೌಲಭ್ಯಗಳು** |
| ಡಿಡಿ–ನೀಡಿಕೆ |
| ಡಿಡಿ–ರದ್ದುಪಡಿಸುವುದು |
| ಡಿಡಿ–ನಕಲು |
| ಡಿಡಿ–ಪುನರ್ ಮಾನ್ಯತೆ |
| ಪಿಒ–ನೀಡಿಕೆ |
| ಪಿಒ–ರದ್ದುಪಡಿಸುವುದು |
| ಪಿಒ–ನಕಲು |
| ಪಿಒ–ಪುನರ್ ಮಾನ್ಯತೆ |
| ಟಿಟಿ–ನೀಡಿಕೆ |
| ಟಿಟಿ–ರದ್ದುಪಡಿಸುವುದು |
| ಟಿಟಿ–ನಕಲು |
| ಟಿಟಿ–ಪುನರ್ ಮಾನ್ಯತೆ |
| ಇಎಫ್‌ಟಿ–ಶುಲ್ಕಗಳು–ಸ್ವೀಕಾರ |